ತಕ್ಷಣ ಮಾಡಿದರೆ, ಭೂಮಿಯಲ್ಲಿ ಬಿದ್ದಂತಹ ಬೆಳೆ ರೈತನ ಕೈಗೆ ಬರುವುದರಲ್ಲಿ ಯಾವ ಸಂಶಯ ಇಲ್ಲ. ಮಳೆಗಾಲ ಹೋದನಂತರ ಮೋಡ ಬಿತ್ತನೆ ಮಾಡುವುದಕ್ಕಿಂತ ಈಗ ತಕ್ಷಣವಾಗಿ ಅದರ ಬಗ್ಗೆ ಗಮನಹರಿಸಿದರೆ ಬಹಳ ಸೂಕ್ತವೆಂಬುದು ನನ್ನ ಅಭಿಪ್ರಾಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಮೋಡ ಬಿತ್ತನೆ ಕಾರ್ಯಕ್ರಮದ ವಿಚಾರದಲ್ಲಿಯೂ ಕೂಡ ಕಳೆದಬಾರಿ ವಿವಾದ ಆಗಿರತಕ್ಕಂಥಾದ್ದು ತಾವು ಕಂಡಿದ್ದೀರಿ. ಅನೇಕರ ದೃಷ್ಟಿಯಲ್ಲಿ ಅದೊಂದು ಯಶಸ್ವಿ ಕಾರ್ಯಕ್ರಮವೆಂದು ಭಾವಿಸಿಕೊಂಡಿದ್ದಾರೆ. ಕೆಲವರು ಇದು ಅವೈಜ್ಞಾನಿಕವಾದುದು, ಇದರಿಂದ ಏನೂ ಪ್ರತಿಫಲ ಸಿಗಲಿಲ್ಲ, ಐದುವರೆ ಕೋಟಿ ರೂಪಾಯಿಗಳು ಮಾತ್ರ ಖರ್ಚಾದವು ಎನ್ನತಕ್ಕಂಥ ಮಾತಿದೆ. ತಾವು ಹೇಳಿದಂತೆ ಮೋಡಗಳು ಇದ್ದಾಗ, ಬಿತ್ತನೆ ಕಾರ್ಯಕ್ರಮ ಮೋಡಗಳ ಮೇಲೆ ಮಾಡಿದರೆ ಮಳೆಬರುತ್ತದೆಂಬ ರೀತಿ ಇದೆ. ಇದೊಂದು ಪರ್ಯಾಯವಾಗಿರತಕ್ಕಂಥ ವ್ಯವಸ್ಥೆ. ಬರ ಪರಿಹಾರವನ್ನು ಎದುರಿಸುವಂಥ ದಿಕ್ಕಿನಲ್ಲಿ ಏನೆಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ, ಆ ಕಾರ್ಯಕ್ರಮಗಳಲ್ಲಿ ಮೋಡ ಬಿತ್ತನೆಯ ಕಾರ್ಯಕ್ರಮವೂ ಕೂಡ ಒಂದು. ಅದನ್ನೂ ಕೂಡ ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ಅಯಾ ಸಂದರ್ಭಕ್ಕನುಗುಣವಾಗಿ ಕೈಗೊಳ್ಳುತ್ತೇವೆ.

(ಮಾನ್ಯ ಶ್ರೀ ಡಿ.ಎನ್. ಜೀವರಾಜ್‌ರವರು ಸಭೆಯಲ್ಲಿ ಹಾಜರಿರಲಿಲ್ಲ)

ಗೊಂದಲ

ಅಧ್ಯಕ್ಷರು : ಮಾನ್ಯ ಶಂಕರಲಿಂಗೇಗೌಡರೇ, ನಿಮ್ಮ ಪ್ರಶ್ನೆ ಕೇಳಿ.

ಮೈಸೂರು ನಗರದಲ್ಲಿ ಪ್ರಕೃತಿ ವಿಕೋಪ ಪರಿಹಾರ

75 (593) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಇತ್ತೀಚಿನ ಅತಿಹೆಚ್ಚು ಮಳೆಯ ಕಾರಣ ಪ್ರಕೃತಿ ವಿಕೋಪದಿಂದಾಗಿ ತೊಂದರೆಗೀಡಾದ ಕುಟುಂಬಗಳೆಷ್ಟು;

ಆ) ಸರ್ಕಾರದಿಂದ ಸದರಿ ಕುಟುಂಬಗಳಿಗೆ ಪರಿಹಾರ ನೀಡಲಾಗಿದೆಯೆ;

ಇ) ನೀಡಿದ್ದಲ್ಲಿ, ಯಾವ ಯಾವ ರೂಪದಲ್ಲಿ ಹಾಗೂ ಎಷ್ಟು ನೀಡಲಾಗಿದೆ; (ಕುಟುಂಬವಾರು ವಿವರ ನೀಡುವುದು);

ಈ) ಹಾಗಿದ್ದಲ್ಲಿ, ಯಾವಾಗ ನೀಡಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) 2004ರ ಮೇ ತಿಂಗಳಿನಿಂದ ಇಲ್ಲಿಯವರೆಗೂ ಮಳೆ ಹಾನಿಯಿಂದ ತೊಂದರೆಗೀಡಾದ ಕುಟುಂಬಗಳ ಒಟ್ಟು ಸಂಖ್ಯೆ 5.

ಆ) 4 ಕುಟುಂಬಗಳಿಗೆ ಪರಿಹಾರ ನೀಡಲಾಗಿದೆ.

ಇ) ಪರಿಹಾರವನ್ನು ನಗದು ರೂಪದಲ್ಲಿ ನೀಡಲಾಗಿದೆ. ಪರಿಹಾರ ಪಡೆದಿರುವ ಕುಟುಂಬಗಳ ವಿವರ ಇಂತಿದೆ.

1) ಶ್ರೀ ಬೈರನಾಯ್ಕ ನಂ. 625, ಯರಗನಹಳ್ಳಿ, ಮೈಸೂರು ರೂ. 300
2) ಶ್ರೀ ಮಹದೇವನಾಯಕ ನಂ. 625/4ನೇ ಕ್ರಾಸ್ ಯರಗನಹಳ್ಳಿ, ಮೈಸೂರು ರೂ. 300

3) ಶ್ರೀ ಆರ್. ನವೀನ್ ಬಿನ್ ಲೇಟ್ ರಾಮಯ್ಯ ನಂ. 2036,
8ನೇ ಕ್ರಾಸ್, ಅಶೋಕಪುರಂ, ಮೈಸೂರು ರೂ. 1500

4) ಶ್ರೀ ಚಿಕ್ಕಣ್ಣ ಬಿನ್ ಲೇಟ್ ರಂಗಯ್ಯ ನಂ. 150,
ಹರಿಜನ ಕಾಲೋನಿ, ಮೇಟಗಳ್ಳಿ, ಮೈಸೂರು ರೂ. 500

ಈ) 1 ಕುಟುಂಬಕ್ಕೆ ಸದ್ಯದಲ್ಲೇ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಒದಗಿಸಿರುವ ಉತ್ತರ ಅರ್ಥವಿಲ್ಲದ ಉತ್ತರ. ಇದು ಅಧಿಕಾರಿಗಳ ಬೇಜವಾಬ್ದಾರಿಯ ಉತ್ತರವೆಂದು ಹೇಳಿದರೂ ತಪ್ಪಾಗಲಾರದು. ನಾವೇ ಕಳೆದ ಸಾರಿ ಪ್ರಕೃತಿ ನಮಗೆ ಒಲಿಯಲಿಲ್ಲ. ಈ ಸಾರಿ ಪ್ರಕೃತಿ ಮೈಸೂರಿನಲ್ಲಿ ವಿಕೋಪಕ್ಕೆ ಹೋಯಿತು. ನಾವು ಮತ್ತು ಪ್ರಕೃತಿ ಎಂದೂ ತನ್ನ ಸೋಲನ್ನು ಒಪ್ಪಿಕೊಳ್ಳುವುದಿಲ್ಲ. ಮನುಷ್ಯ ಸಾಯಲೇಬೇಕು, ಪ್ರಕೃತಿ ಯಾವತ್ತಾದರೂ ನಾಶ ಮಾಡಲೇಬೇಕು. ಆದರೆ, ನಾನು ಇಲ್ಲಿ ಒಂದು ಪ್ರಶ್ನೆ ಕೇಳಿದ್ದೇನೆ. ನಾನೇ ಹೋಗಿ ನೋಡಿದ್ದೇನೆ, ನೂರಾರು ಗುಡಿಸಲುಗಳು ಜಲಾವೃತವಾಗಿದ್ದನ್ನು ಕಣ್ಣಾರೆ ನೋಡಿದ್ದೇನೆ. ಆದರೆ, ಇಲ್ಲಿ ಕೊಟ್ಟಿರುವುದು ಬೇಜವಾಬ್ದಾರಿ ಮಾಹಿತಿಗಳು. ಕುದುರೆಮಾಳ, ಬಂಬೂಬಜಾರ್ ಇಂತಹ ಕಡೆಗಳಲ್ಲೆಲ್ಲಾ ಗುಡಿಸಲುಗಳು ಜಲಾವೃತವಾಗಿದೆ. ಇಂತಹ ಒಂದು ಬೇಜವಾಬ್ದಾರಿ ಉತ್ತರ ಕಳುಹಿಸಿತಕ್ಕ ಅಧಿಕಾರಿಗಳಿಗೆ ನೀವು ಸರಿಯಾಗಿ ಹೇಳಿ. ಅದೂ ಅಲ್ಲದೆ ಅವರು ಕೊಡತಕ್ಕಂಥಾದ್ದು ಮುನ್ನೂರು ರೂಪಾಯಿ, ಇನ್ನೂರು ರೂಪಾಯಿಗಳ ಪರಿಹಾರ. "ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎಂದ ಹಾಗೆ" ಏನಿದು, ಬಡವರು ಬದುಕಬಾರದೇ? ಇವರು ಯಾವ ರೀತಿ ಅಸೆಸ್ ಮಾಡುತ್ತಾರೆ? ಅದನ್ನು ತೆಗೆದುಕೊಳ್ಳುವುದಕ್ಕೂ ಅವರು ಅಲೆದು, ಅಲೆದು ಚಪ್ಪಲಿಯೆಲ್ಲಾ ಸವೆದು ಹೋಗುತ್ತದೆ. ಅವರು ತಾಲ್ಲೂಕು ಆಫೀಸಿಗೆ ಹೋಗಬೇಕು, ಇಲ್ಲವೇ ಡಿ.ಸಿ. ಆಫೀಸಿಗೆ ಹೋಗಬೇಕು. ಇಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ, ಬಡವರ ಮೇಲೆ ಬ್ರಹ್ಮಾಸ್ತ್ರ ಬಿಡತಕ್ಕಂಥ ಕೆಲಸ ಮಾಡುವ ಯಾವುದೇ ಸರ್ಕಾರಕ್ಕೂ ಒಳ್ಳೆಯದಾಗಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಪ್ರಾಯಶಃ ಅವರು ಜನಪ್ರತಿನಿಧಿಗಳಾಗಿ ಅಲ್ಲಿನ ವಾಸ್ತವಾಂಶಗಳು ಹೆಚ್ಚು ಅವರಿಗೆ ಗೊತ್ತಿರುತ್ತದೆ. ಒಂದುವೇಳೆ ನಾವು ಕೊಟ್ಟಿರತಕ್ಕ ಉತ್ತರದಿಂದ ಅವರಿಗೆ ಸಮಾಧಾನವಾಗದಿದ್ದರೆ, ಎಲ್ಲೆಲ್ಲಿ ಆ ರೀತಿ ಆಗಿದೆಯೆಂದು ನನಗೆ ಪತ್ರ ಬರೆದರೆ, ನಾನು ಜಿಲ್ಲಾಧಿಕಾರಿಗಳ ಜೊತೆ ಮಾತನಾಡಿ, ಅವರು ಹೇಳಿದಂತೆ ಬಂಬೂಬಜಾರ್ ಮೊದಲಾದ ಪ್ರದೇಶಗಳಲ್ಲಿ ಅಗತಕ್ಕಂಥ ಅನಾಹುತಕ್ಕೆ ಪರಿಹಾರ ಕೊಡಿಸುವಂಥ ಕೆಲಸ ಮಾಡುತ್ತೇವೆ. ಅವರು ಹೇಳಿದಂತೆ ಬರೀ ಮುನ್ನೂರು, ನಾಲ್ಕೂನೂರು ಅಷ್ಟೇ ಅಲ್ಲ. ಆರ್. ನವೀನ್ ಬಿನ್ ಲೇಟ್ ರಾಮಯ್ಯ ಎಂಬುವರಿಗೆ ಹದಿನೈದು ನೂರು ರೂಪಾಯಿಗಳನ್ನು ಕೊಟ್ಟಿದ್ದೇವೆ. ನಷ್ಟದ ಅನುಪಾತಕ್ಕೆ ಅನುಗುಣವಾಗಿ, ಆ ನಿಯಮಾವಳಿಗನುಸಾರ ಕೊಟ್ಟಿದ್ದೇವೆ. ಮಹದೇವಮ್ಮ ಎಂಬುವರಿಗೆ ಮಾತ್ರ ನಾವಿನ್ನೂ ಕೊಡಬೇಕಾಗಿದೆ. ಅದು ವಿಜಯಶ್ರೀಪುರ, ಮೈಸೂರು. ಈ ಪ್ರಕರಣವನ್ನೂ ಬಗೆಹರಿಸಿ ಕೊಡಬೇಕೆಂದು ಆಜ್ಞೆಯನ್ನು ಮಾಡಿದ್ದೇವೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಭೈರನಾಯಕ ಎನ್ನುವವನಿಗೆ 625, ಮಹದೇವನಾಯಕ ಎಂಬುವರಿಗೆ 625, ಯರಗನಹಳ್ಳಿಯವನಿಗೆ 300, ಆರ್. ನವೀನ್ ಎನ್ನುವವನಿಗೆ 1,500, ಚಿಕ್ಕಣ್ಣ ಎಂಬುವರಿಗೆ 150, ಮೇಟಗಳ್ಳಿ ಕಾಲೋನಿಯಲ್ಲಿ 500. ಯಾರಿಗೂ 10 ಸಾವಿರ, 15

ಸಾವಿರ ಕೊಟ್ಟಿರತಕ್ಕ ಮಾಹಿತಿಗಳು ಇಲ್ಲ. ಯಾರಾದರೂ ಶ್ರೀಮಂತರಿಗಾದರೆ ಅಧಿಕಾರಿಗಳು ಓಡಿ ಹೋಗಿ ಎಲ್ಲಾ ಕೆಲಸ ಮಾಡಿಕೊಡುತ್ತಾರೆ. ಬಡವರು ಏನಾದರೂ ಇಂತಹ ಅಪಘಾತಕ್ಕೆ ತುತ್ತಾದರೆ ಅವರನ್ನು ನೋಡತಕ್ಕ ಕೆಲಸವನ್ನೂ ಮಾಡುವುದಿಲ್ಲ, ಸಮೀಕ್ಷೆಯನ್ನೂ ಸರಿಯಾಗಿ ಮಾಡುವುದಿಲ್ಲ, ಎಲ್ಲಾ ಅಧಿಕಾರಿಗಳೂ ಶುದ್ಧ ಸೋಂಬೇರಿಗಳು. ಅಧಿಕಾರಿಗಳು ಮತ್ತು ರಾಜಕಾರಣಿಗಳು ಹಾಗೂ ಮೇಷ್ಟ್ರು ಈ ಮೂರು ಜನರೂ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಆಗ ಮಾತ್ರ ಈ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಸರಿಯಾಗಿರುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ನಾನು ಸಂಪೂರ್ಣವಾಗಿ ಮಾನ್ಯ ಶಂಕರಲಿಂಗೇಗೌಡರ ಮಾತನ್ನು ಒಪ್ಪುತ್ತೇನೆ. ರಾಜಕಾರಣಿಗಳು ಮತ್ತು ಅಧಿಕಾರಿಗಳಿಬ್ಬರೂ ಶುದ್ಧ ಸೋಂಬೇರಿಗಳು. ಇದನ್ನು ಅವರೂ ಒಪ್ಪುವುದಾಗಿದ್ದರೆ ನಮ್ಮದೇನೂ ಆಕ್ಷೇಪಣೆ ಇಲ್ಲ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಪ್ರಕೃತಿ ವಿಕೋಪಕ್ಕೆ ಸಿಕ್ಕಿದಾಗ, ಪ್ರಕೃತಿಯ ಅವಘಡಕ್ಕೆ ಸಿಕ್ಕಿದ ಸಂದರ್ಭದಲ್ಲಿ ಕೊಡುವಂಥ ಪರಿಹಾರ ಅತ್ಯಂತ ನಿಕೃಷ್ಟವಾಗಿದೆ. ಯಾವುದೋ ಕಾಲದಲ್ಲಿ, ಓಬೀರಾಯನ ಕಾಲದಲ್ಲಿ ನಿಗದಿ ಮಾಡಿದಂಥ ಪರಿಹಾರ ಇದು.

ಪ್ರಕೃತಿವಿಕೋಪ ಪರಿಹಾರ ನಿಧಿಯನ್ನು ಪುನರ್ ಪರಿಶೀಲನೆ ಮಾಡಬೇಕು. ಸ್ವಲ್ಪ ಜಾಸ್ತಿ ಕೊಡಿಸಲಿಕ್ಕೆ ಸರ್ಕಾರ ಏನಾದರೂ ಯೋಚನೆ ಮಾಡುತ್ತಿದೆಯೇ? ಅದನ್ನು ಏನಾದರೂ ಕೊಡಿಸಬಹುದೇ? 50–60 ಸಾವಿರ ಕಳೆದುಕೊಂಡಾಗ 200–300 ರೂಪಾಯಿ ಕೊಡುತ್ತೇವೆಂದರೆ ಇದು ಸರಿಯಾಗುವುದಿಲ್ಲ. ಇದನ್ನು ದಯವಿಟ್ಟು ಏನಾದರೂ ಮಾಡಿ ಸರಿಪಡಿಸಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಇವರು ಕೊಡುವುದು ಕೇವಲ 500 ರೂಪಾಯಿ ಇದನ್ನು ಓಬೀರಾಯನ ಕಾಲದಲ್ಲಿ ಫಿಕ್ಸ್ ಮಾಡಿದ್ದು. ಅದ್ದರಿಂದ ದಯವಿಟ್ಟು ಗೈಡ್‌ಲೈನ್ಸ್ ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಬಹಳ ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ. ನಮ್ಮ ಮನಸ್ಸಿನಲ್ಲೂ ಸಹ ಇದೆ. ಆ ಕಾರಣಕ್ಕಾಗಿಯೇ ಪುನರ್ ಪರಿಶೀಲನೆ ಮಾಡುತ್ತೇವೆ. ನಮಗೂ ಸಂಪನ್ಮೂಲಗಳ ಇತಿಮಿತಿಗಳು ಇರುತ್ತವೆ. ಆದರೂ ಕೂಡ ಇದು ಬಹಳ ಮುಖ್ಯವಾದುದು. 300 ರೂಪಾಯಿ 500 ರೂಪಾಯಿ ಕೊಟ್ಟರೆ ಅದರಿಂದ ಏನೂ ಆಗುವುದಿಲ್ಲ. ಆದ್ದರಿಂದ ನಾವು ಪುನರ್ ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು : ಪುನರ್ ಪರಿಶೀಲನೆ ಮಾಡುತ್ತೇನೆಂದು ಉತ್ತರ ಕೊಟ್ಟಿದ್ದಾರಲ್ಲಾ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೇ, ಪ್ರಕೃತಿ ವಿಕೋಪದಲ್ಲಿ ಏನಾಗಿದೆ ಅಕ್ಸಿಡೆಂಟಲ್, ಫೈರ್‌ಗೆ ಬರುವುದಿಲ್ಲ. ಈ ಸಮಸ್ಯೆ ಕಳೆದ ಮೂರು ವರ್ಷಗಳಿಂದ ಏನಾಗಿದೆ ಅಂದರೆ ಆಕಸ್ಮಿಕವಾಗಿ ಬೆಂಕಿ ಬಿದ್ದು ಸುಟ್ಟಂಥಾದ್ದು, ರೈತರ ಹುಲ್ಲು ಬಣವಿಗಳಾಗಲಿ, ದನಗಳು ಸತ್ತರೆ ಅಥವಾ ಮನೆಗಳು ನಾಶವಾದರೆ ಪರಿಹಾರ ಸಿಗುತ್ತಿಲ್ಲ. ಅದ್ದರಿಂದ ಮಾನ್ಯ ಸಚಿವರು ಇದನ್ನು ಪುನರ್ ಪರಿಶೀಲನೆ ಮಾಡಿಕೊಡುವಂತಹ ವ್ಯವಸ್ಥೆ ಮಾಡಿಸುತ್ತಾರಾ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ಬಣವಿಗಳು ಸುಟ್ಟಂಥದ್ದಕ್ಕೆ ಪರಿಹಾರ ಕೊಡುವಂಥಾದ್ದು ಇಲ್ಲ. ದನದ ಕೊಟ್ಟಿಗೆ ಸೇರಿಲ್ಲ. ಅದನ್ನು ಸೇರಿಸಬೇಕಾಗಿದೆ. ಈಗ ಮಾನ್ಯ ಸದಸ್ಯರಾದ ಆರಗ ಜ್ಞಾನೇಂದ್ರರವರು ಬಹಳ ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ.

ಬಹಳ ಇದರಲ್ಲಿ ತಿದ್ದುಪಡಿಯಾಗಬೇಕಾಗಿದೆ. ಪುನರ್ ಪರಿಶೀಲನೆ ಆಗಬೇಕಾಗಿದೆ. ಯಾವುದೋ ಓಬೀರಾಯನ ಕಾಲದ ನಿಯಮಾವಳಿಗಳನ್ನು ನಾವು ಅನುಸರಿಸುತ್ತಿದ್ದೇವೆ. ಅದನ್ನು ನಾವು ಬದಲಾವಣೆ ಮಾಡುತ್ತೇವೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೇ, ಸಿ.ಆರ್.ಎಫ್ ಫಂಡ್‌ನಿಂದ ಕೊಡುತ್ತಿದ್ದರು. ಅದನ್ನು ವಿತ್‌ಡ್ರಾ ಮಾಡಿದ್ದರಿಂದ ಇದು ಆಗಿದೆ. ಅದ್ದರಿಂದ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಒತ್ತಾಯ ಮಾಡಬೇಕಾಗುತ್ತದೆ. ಫೈರ್‌ಗೂ ಸಹ ಕೊಡಬೇಕೆನ್ನುವುದರ ಬಗ್ಗೆ ಇರುವ ಆದೇಶವನ್ನು ಹಿಂತೆಗೆದುಕೊಂಡಿರುವ ಆದೇಶದ ಪ್ರತಿಯನ್ನು ನಾನು ತಮ್ಮ ಗಮನಕ್ಕೆ ಕಳುಹಿಸುತ್ತಿದ್ದೇನೆ. ನೋಡಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಅದು ಇತ್ತೀಚಿನ ಸರ್ಕಾರಿ ಆದೇಶ ಅಂತ ಕಾಣಿಸುತ್ತದೆ. ಅದು ನನ್ನ ಗಮನಕ್ಕೆ ಬಂದಿಲ್ಲ. ನಾವು ಹಿಂದೆ ಇದ್ದಾಗ ಈ ಅಕ್ಸಿಡೆಂಟ್ ಫೈರ್‌ಗೂ ಸಹ 2 ಲಕ್ಷ ಒಂದೊಂದು ಜಿಲ್ಲೆಗೆ ಕೊಟ್ಟಿರತಕ್ಕಂಥ ಉದಾಹರಣೆಗಳು ಇವೆ. ಆದರೆ ಇತ್ತೀಚೆಗೆ ಅದನ್ನು ಹಿಂತೆಗೆದುಕೊಂಡಿದ್ದರೆ ನಾನು ಖಂಡಿತವಾಗಿಯೂ ಕೂಡ ಅದನ್ನು ಸೇರಿಸತಕ್ಕಂಥ ಪ್ರಯತ್ನ ಮಾಡುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಅದರ ಜೊತೆಗೆ ರಾಷ್ಟ್ರೀಯ ಕೌಟುಂಬಿಕ ಪರಿಹಾರ ಯೋಜನೆಯಲ್ಲಿ ಸುಮಾರು 57 ಸಾವಿರ ಜನಕ್ಕೆ ಇಡೀ ರಾಜ್ಯಾದ್ಯಂತ 10 ಸಾವಿರ ರೂಪಾಯಿ ಪರಿಹಾರ ಏನು ಸಿಗಬೇಕಾಗಿತ್ತು ಅದು ಸಿಕ್ಕಿಲ್ಲ. ಈ ಎರಡನ್ನೂ ಅತ್ಯಂತ ಅವಶ್ಯಕವಾಗಿ ಗಮನಿಸಬೇಕು.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರಿಗೆ ನಾನು ಹೇಳುವುದೇನೆಂದರೆ ಈ ಪ್ರಕೃತಿ ವಿಕೋಪನಿಧಿಯಿಂದ ಒಂದು ಗೈಡ್‌ಲೈನ್ಸ್ ಬಂದಿದೆ. ಹಳೆಯ ಹಳ್ಳ ಹೊಕ್ಕು ಹಾಳಾದರೆ ಪರಿಹಾರ ಕೊಡುತ್ತಾರೆ. ಅದೇ ಒಂದು ಕೆರೆ ಒಡೆದು ಅದರ ದಂಡೆಯಲ್ಲಿ ಇದ್ದಂತಹ ಜಮೀನುಗಳು ಹಾಳಾದರೆ ಅದಕ್ಕೆ ಏನೂ ಪರಿಹಾರ ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ. ನಮ್ಮಲ್ಲಿ ಆಗಿರುವ ಒಂದು ಪ್ರಕರಣ ಇದೆ. ಅದರ ಬಗ್ಗೆ ನಾನು ತಮಗೆ ಪತ್ರ ಬರೆಯುತ್ತೇನೆ. ನಾನು ಜಿಲ್ಲಾಧಿಕಾರಿಗಳಿಗೂ ಹೇಳಿದರೂ ಸಹ ಅವರು ಸಹ ಆ ಗೈಡ್‌ಲೈನ್ಸ್‌ನಲ್ಲಿ ಇಲ್ಲ ಅಂತ ಹೇಳುತ್ತಾರೆ. ಅಲ್ಲಿ ಒಬ್ಬ ರೈತ ಹಾಳಾಗಿ ಹೋಗಿದ್ದಾನೆ. ಕೆರೆ ಒಡೆದು ಎಲ್ಲಾ ಹಾಳಾಗಿ ಹೋಗಿದೆ. ಅದಕ್ಕೆ ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ. ಆ ಗೈಡ್‌ಲೈನ್ಸ್‌ನಲ್ಲಿ ಆ ರೀತಿ ಆದರೆ ಬರುವುದಿಲ್ಲ ಹೊಳೆ ದಂಡೆ ಮೇಲೆ ಹರಿದು ಹೋಗಿ ಹಳ್ಳಗಳು ಹಾಳಾದರೆ ಬರುತ್ತವೆಂದು ಇದೆ. ಅಂತ ಆ ಗೈಡ್‌ಲೈನ್ಸ್‌ನಲ್ಲಿ ಇದೆ ಅಂತ ಹೇಳುತ್ತಾರೆ. ತಾವು ಇದನ್ನು ವಿಚಾರ ಮಾಡಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಪ್ರಾಯಶಃ ಆ ಅಧಿಕಾರಿ ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ ಅಂತ ಅದರ ಅರ್ಥ. ಈ ಕೆರೆ ಒಡೆದು ಹಾಳಾಗಿರತಕ್ಕಂಥ ಪ್ರಸಂಗಗಳಲ್ಲೂ, ಸಹ ಪರಿಹಾರ ಕೊಟ್ಟಿದ್ದೇವೆ. ಕಾಲುವೆ ಒಡೆದಿರುವಂತಹ ಪ್ರಸಂಗದಲ್ಲೂ ಕೊಟ್ಟಿದ್ದೇವೆ. ಆದರೆ ತಾವು ಹೇಳಿದಂತೆ ಕೊಟ್ಟಿರುವ ಹಣ ಬಹಳ ಕಡಿಮೆಯಾಗಿದೆ. ಪರಿಹಾರ ಕೊಡಲೇ ಬೇಕಾಗುತ್ತದೆ ಅದನ್ನು ಬಹಳ ತಾಂತ್ರಿಕವಾಗಿ ಅಕ್ಷರಸಹ ಅರ್ಥೈಸುವುದರ ಮೂಲಕ, ಅದು ಬಹಳ ತಪ್ಪಾಗುತ್ತದೆ. ತಾವು ಹೇಳಿದಂತೆ ಈಗ ನಾನು ಆ ಜಿಲ್ಲಾಧಿಕಾರಿಗಳ ಜೊತೆ ಮಾತನಾಡುತ್ತೇನೆ. ಆ ತಹಶೀಲ್ದಾರ್‌ರವರಿಗೂ ಸಹ ಸರಿಯಾದಂತಹ ರೀತಿಯಲ್ಲಿ ಇದನ್ನು ಅರ್ಥೈಸಿಕೊಳ್ಳಬೇಕು ಮತ್ತು ಪರಿಹಾರ ಕೊಡಬೇಕೆಂದು ನಾನು ಸೂಚಿಸುತ್ತೇನೆ.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, ಈ ಪ್ರಕೃತಿ ವಿಕೋಪದ ಅಡಿಯಲ್ಲಿ ಸಿಡಿಲು ಬಡಿದು ಸತ್ತ ವ್ಯಕ್ತಿಗಳಿಗೆ ಮಾತ್ರ ಪರಿಹಾರ ಕೊಡುತ್ತಾರೆ. ಆದರೆ ಸಿಡಿಲು ಬಡಿದು ಜೀವಂತ ಇರುವವರಿಗೆ ಇವತ್ತಿಗೂ ಯಾರಿಗೂ ಪರಿಹಾರವನ್ನು ಕೊಟ್ಟಿಲ್ಲ. ಲಕ್ಷಾಂತರ ರೂಪಾಯಿಗಳು ಖರ್ಚು ಮಾಡಿದರೂ ಕೂಡ ಅವರಿಗೆ ಯಾವುದೇ ರೀತಿಯ ಪರಿಹಾರ ಸಿಗದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರಾಣಿಗಳು ಮತ್ತು ಕುರಿಗಳು ಈ ಸಿಡಿಲು ಬಡಿದು ಸತ್ತ ಸಂದರ್ಭದಲ್ಲಿ ಅದರ ಮಾಲೀಕರಿಗೆ ಯಾವುದೇ ರೀತಿಯ ಪರಿಹಾರವನ್ನು ಕೊಡುವುದಕ್ಕೆ ಸರ್ಕಾರದಲ್ಲಿ ಯಾವುದೇ ನಿಯಮಗಳು ಇಲ್ಲ. ಮತ್ತು ಈ ಪ್ರಕೃತಿ ವಿಕೋಪದಡಿಯಲ್ಲಿ ದೊಡ್ಡ ಹಿಡುವಳಿದಾರರಿಗೆ ಪರಿಹಾರ ಕೊಡುತ್ತಿಲ್ಲ. ಸಣ್ಣ ಹಿಡುವಳಿದಾರರಿಗೆ ಮಾತ್ರ ಪರಿಹಾರ ಕೊಡುತ್ತಾರೆ. ದೊಡ್ಡ ಹಿಡುವಳಿದಾರರಿಗೆ ಲಕ್ಷಾಂತರ ರೂಪಾಯಿಗಳ ನಷ್ಟವಾಗಿದ್ದರೂ ಸಹ ಪರಿಹಾರ ಕೊಡುವುದಿಲ್ಲ. ಈಗ ಹಾವೇರಿ ಜಿಲ್ಲೆಯಲ್ಲಿ ಕಳೆದ ಮೇ ತಿಂಗಳಲ್ಲಿ ರೈತರಿಗೆ ಒಂದೂವರೆ ಎರಡು ಲಕ್ಷ ರೂಪಾಯಿಗಳಷ್ಟು ಬಾಳೆ, ಕಬ್ಬು ಮತ್ತು ತೆಂಗಿನ ಗಿಡಗಳನ್ನು ನಾಶಪಡಿಸಿಕೊಂಡು ಅವರು ದೊಡ್ಡ ಹಿಡುವಳಿದಾರರಾಗಿರುವುದರಿಂದ ಅವರಿಗೆ ಪರಿಹಾರ ಕೊಡುವುದಕ್ಕೆ ಸರ್ಕಾರದಲ್ಲಿ ಅನುಮತಿ ಇಲ್ಲ ಎಂದು ಹೇಳುತ್ತಿದ್ದಾರೆ. ದಯವಿಟ್ಟು ಹೆಚ್ಚಿನ ನಷ್ಟವಾದ ಸಂದರ್ಭದಲ್ಲಿ ದೊಡ್ಡ ಹಿಡುವಳಿದಾರರಿಗೂ ಸಹ ಪರಿಹಾರ ಕೊಡಬೇಕು. ಮತ್ತು ಸಿಡಿಲು ಬಡಿದು ಜೀವಂತವಾಗಿ ಅರೆಜೀವದಲ್ಲಿ ಅವರ ಬದುಕನ್ನು ಸಾಗಿಸುತ್ತಿದ್ದಾರೆ. ಅವರಿಗೂ ಸಹ ಪರಿಹಾರವನ್ನು ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಅವರು ಹೇಳಿದಂತೆ ದೊಡ್ಡ ಹಿಡುವಳಿದಾರರಿಗೆ ಪರಿಹಾರ ಕೊಡುವುದಕ್ಕೆ ಅವಕಾಶ ಇಲ್ಲ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಮಾತ್ರ ಪರಿಹಾರ ಕೊಡುವುದಕ್ಕೆ ಅವಕಾಶ ಇದೆ. ಮತ್ತು ಕುರಿಗಳು ತೀರಿಕೊಂಡಿರತಕ್ಕಂಥ ಸಂದರ್ಭದಲ್ಲಿ ಪರಿಹಾರ ಕೊಡುತ್ತೇವೆ. ಆದರೆ ಅವುಗಳ ಪೋಸ್ಟ್ ಮಾರ್ಟಂ ಮಾಡಬೇಕೆನ್ನುವ ಕಾಯ್ದೆಗಳು ಇರುವುದರಿಂದ ಕೆಲವು ಕಡೆ ತೊಂದರೆಯಾಗಿದೆ. ಆದರೆ ತಾವು ಹೇಳಿದಂತೆ ಅಮೂಲಾಗ್ರವಾಗಿ ಈ ಗೈಡ್‌ಲೈನ್ಸ್‌ನ್ನು ಬದಲಿ ಮಾಡಬೇಕಾದುದ್ದು ಇದೆ ಬದಲಾದಂತಹ ಸ್ಥಿತಿಗೆ ಅದನ್ನು ಬದಲಾವಣೆ ಮಾಡುವಂತಹ ಪ್ರಯತ್ನವನ್ನು ನಾವು ಮಾಡುತ್ತೇವೆ.

ಅಧ್ಯಕ್ಷರು : ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

(ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ದಿನಾಂಕ 26–7–2004ರ ಲಿಖಿತ ಮೂಲಕ ಉತ್ತರಿಸುವ 101 ಪ್ರಶ್ನೆಗಳ ಪೈಕಿ 65 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು. ಅನುಬಂಧ 1 ಈಗ ಕಾಗದ ಪತ್ರಗಳನ್ನು ತೆಗೆದುಕೊಳ್ಳೋಣ.

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು

I. ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿ) ಅವರು:

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ, 8(3)ರ ಪ್ರಕರಣದ ಮೇರೆಗೆ:

1) 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಯ ಅನುಸೂಚಿ IVಕ್ಕೆ ತಿದ್ದುಪಡಿ ಮಾಡಿ ದಿನಾಂಕ 20–5–2004ರಂದು ಹೊರಡಿಸಲಾದ ಸಿಆಸುಇ 4 ಸೇಇವಿ 2004ನೇ ಸಂಖ್ಯೆಯ ಅಧಿಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.